<u>ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.</u>

ಸಿ.ಸಿ.ನಂ.**24/2020**
ಸಿ.ಡಬ್ಲೂ:**05**
ಪಿ.ಡಬ್ಲೂ:**02**

| | |
|---|---|
| ಸಾಕ್ಷಿದಾರರ ಹೆಸರು | - ನಿಂಗವ್ವ ನಾಯಕೋಡಿ |
| ತಂದೆಯ/ಗಂಡನ ಹೆಸರು | - ಶಿವಪ್ಪ |
| ವಯಸ್ಸು | -60 ವರ್ಷ |
| ಉದ್ಯೋಗ | - ಮನೆಕೆಲಸ |
| ವಾಸಸ್ಥಳ | - ಬಬಲೇಶ್ವರ |

<u>ಸಾಕ್ಷಿಯನ್ನು ದಿನಾಂಕ **20.09.2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು ಮುಖ್ಯ ವಿಚಾರಣೆ : ಎ.ಪಿ.ಪಿ. ರವರಿಂದ</u>

ಚಾ.ಸಾ.1 ನನ್ನ ಸೊಸೆ, ಚಾ.ಸಾ.4 ನನ್ನ ಗಂಡ, ಚಾ.ಸಾ.6 ರಿಂದ 10 ರವರ ಪರಿಚಯವಿದೆ. ಆರೋಪಿತರು ಮೈದನುನ ಮಕ್ಕಳು.

ಚಾ.ಸಾ.1,4,6 ರವರ ಎಲ್ಲರೂ ಕೂಡಿ ಬಬಲೇಶ್ವರ ಗ್ರಾಮದಲ್ಲಿ ತೋಟದ ಮನೆಯಲ್ಲಿ ವಾಸ ಮಾಡುತ್ತೇವೆ. ಆರೋಪಿತರು ಎಲ್ಲರೂ ಸಹ ನಮ್ಮ ತೋಟದ ಮನೆಯ ಪಕ್ಕದಲಿ ವಾಸ ಮಾಡುತ್ತಾರೆ. ನಮ್ಮ ಜಮೀನದಲ್ಲಿ ಟಿ.ಸಿ. ಕೂಡಿಸುವ ಸಲುವಾಗಿ ಆರೋಪಿತರು ಮತ್ತು ನಮ್ಮ ಮದ್ಯ ಜಗಳ ಆಗಿರುತ್ತದೆ. ಸುಮಾರು 4 ವರ್ಷಗಳ ಹಿಂದೆ ಬೆಳ್ಳಿಗ್ಗೆ 9.00 ಗಂಟೆ ಸುಮಾರಿಗೆ ಚಾ.ಸಾ7 ರವರ ಟಿ.ಸಿ. ಕೂಡಿಸುವ ಸಲುವಾಗಿ ಗುತ್ತಿಗೆ ಕೊಟ್ಟಿದ್ದು ಅವರ ನಮ್ಮ ಜಮೀನಿಗೆ ಟಿ.ಸಿ ಕೂಡಿಸಲು ಬಂದಾಗ ಆರೋಪಿತರು ಎಲ್ಲರೂ ಬಂದು ಹಲ್ಲೆ ಮಾಡಿರುತ್ತಾರೆ. ಚಾ.ಸಾ.1 ರವರಿಗೆ 3 ನೇ ಆರೋಪಿಗೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ. ನನಗೆ 1 ನೇ ಆರೋಪಿತನು ಟಿಕಾವು ಕಾವಿನಿಂದ ನನ್ನ ತಲೆಗೆ ಹೊಡೆದಿರುತ್ತಾನೆ. ಚಾ.ಸಾ.4 ಈತನಿಗೆ 2 ನೇ ಆರೋಪಿ ಬಡಿಗೆಯಿಂದ ಕೈಗೆ ಹಲ್ಲೆ ಮಾಡಿರುತ್ತಾನೆ. ಚಾ.ಸಾ.6 ಈತನಿಗೆ 3 ನೇ ಆರೋಪಿ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ. ಉಳಿದ ಆರೋಪಿತರು ಏನು ಮಾಡಿರುವುದಿಲ್ಲ. ಜಗಳದಲ್ಲಿ ನನ್ನ ತಲೆಗೆ ಹೊಡೆದಿರುತ್ತಾರೆ. ಚಾ.ಸಾ.4 ಈತನಿಗೆ ಭುಜಕ್ಕೆ ಹೊಡೆದಿರುತ್ತಾರೆ. ಆಲಮೇಲಕ್ಕೆ ಹೋಗಿ ಸರಕಾರಿ ಆಸ್ಪತ್ರೆಗೆ ಹೋಗಿ ಮತ್ತು ಮುಂದೆ ಖಾಸಗಿ ಆಸ್ಪತ್ರೆಗೆ ಹೋಗಿ ಉಪಚಾರವನ್ನು ಪಡೆದುಕೊಂಡಿರುತ್ತೇವೆ. ನಂತರ ಪೋಲಿಸ ಠಾಣೆಗೆ ಹೋಗಿ ಪಿರ್ಯಾದಿಯನ್ನು ಕೊಟ್ಟಿರುತ್ತೇವೆ. ನಾನು ಪೋಲಿಸರ ಸಮಕ್ಷಮ ಹೇಳಿಕೆ ಕೊಟ್ಟಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಮು.ಮಾಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿ ನೀಡಲಾಯಿತು. )

ಪಾಟೀ ಸವಾಲು ಶ್ರೀ : ಎ.ಪಿ.ಪಿ. ರವರಿಂದ

3 ಮತ್ತು 4 ನೇ ಆರೋಪಿತರು ಚಾ.ಸಾ.4 ಈತನಿಗೆ ಬಡಿಗೆಯಿಂದ ಚಾ.ಸಾ.4 ಈತನ ಕೈ ಮುರಿದು ಎಡಗೈ ಮುಂಡಿಗೆ ಭಾರಿ ಗಾಯ ಆಗಿತ್ತು ಎಂದರೆ ಸರಿ. ಜಗಳದಲ್ಲಿ 4 ನೇ ಆರೋಪಿ ಈತನು ಚಾ.ಸಾ.1 ಇಕೆಯ ಸೀರೆ ಹಿಡಿದು ಜಗ್ಗಾಡಿ ಅವಮಾನ ಮಾಡಿರುತ್ತಾನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಚಾ.ಸಾ.6 ಈತನಿಗೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿ. 5 ರಿಂದ 7 ನೇ ಆರೋಪಿತರು ನಮ್ಮ ಎಲ್ಲರಿಗೂ ಹೊಡೆ ಬಡಿ ಮಾಡಿ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿ. ಜಗಳವನ್ನು ನೊಡಿ ಚಾ.ಸಾ.7 ಮತ್ತು 8 ರವರ ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಎಲ್ಲರೂ ನಮಗೆ ಇನ್ನೊಮ್ಮೆ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲ ಅಂತಾ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲು : ಆರೋಪಿ ಪರ ಶ್ರೀ.ಆರ್.ಎಮ್.ಸಿ. ವಕೀಲರಿಂದ

ಸುಮಾರು 4 ವರ್ಷದ ಹಿಂದೆ ಚಾ.ಸಾ.7 ಈತನು ನಮ್ಮ ಜಮೀನಿದಲ್ಲಿ ಟಿ.ಸಿ ಕೂಡಿಸುವ ಕಾಲಕ್ಕೆ ಆರೋಪಿತರು ಎಲ್ಲರು ಬಂದು ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 1 ನೇ ಆರೋಪಿಗೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.4 ಈತನಿಗೆ 2 ನೇ ಆರೋಪಿ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.6 ಈತನಿಗೆ 3 ನೇ ಆರೋಪಿ ಭುಜಕ್ಕೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾ.ಸಾ.4 ಈತನ ಸಹೋದರನಾಗಬೇಕು ಎಂದರೆ ಸರಿ. ಹಿರಿಯರಿಂದ ಬಂದ ಆಸ್ತಿಗಳಲ್ಲಿ 1 ನೇ ಆರೋಪಿ ಮತ್ತು ಚಾ.ಸಾ.4 ರವರು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾ.ಸಾ.1,4,6 ರವರ ಕೂಡಿ 1 ನೇ ಆರೋಪಿಗೆ ಬಂದಿರುವ ಜಮೀನಿನಲ್ಲಿ ಸಾಗುವಳಿ ಮಾಡಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರು ತಮ್ಮ ಹೊಲದಲ್ಲಿ ಮನೆಯನ್ನು ಕಟ್ಟಿಸಿ ಅಲ್ಲೇ ವಾಸ ಮಾಡುತ್ತಾರೆ ಎಂದರೆ ಸರಿ. ಸದರಿ ಮನೆಯಿಂದ ಆರೋಪಿತರ ಎಲ್ಲರಿಗೆ ಹೊರಗೆ ಹಾಕಬೇಕೆಂದು ಚಾ.ಸಾ.1 ರವರು ಆರೋಪಿತರ ವಿರುದ್ಧ ಖೊಟ್ಟಿ ಫಿರ್ಯಾದಿ ಸಲ್ಲಿಸಿ ಈ ದಿನ

ನಾನು ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಜಗಳ ಆದ ದಿನದಂದು ಬೆಳ್ಳಿಗ್ಗೆ 8.00 ಗಂಟೆಗೆ ಊರಿಗೆ ಹೋಗಿರುತ್ತಾನೆ. ನನ್ನ ಮಗ ಮನೆಗೆ ನಮಗೆ ಆರೋಪಿತರು ಎಲ್ಲರೂ ಹೊಡೆ ಬಡಿ ಮಾಡಿದ ನಂತರ ಬಂದಿರುತ್ತಾನೆ.

ಆಲಮೇಲ ಪೋಲಿಸ ಠಾಣೆಗೆ ಚಾ.ಸಾ.1,4,6 ರವರು ಟಂಟಂದಲ್ಲಿ ಹೋಗಿರುತ್ತೇವೆ. ಆಗ ಸಮಯ ಮದ್ಯಾಹ್ನ 12.00 ಗಂಟೆ ಆಗಿತ್ತು. ನನ್ನ ಮಗ ಸಹ ಮದ್ಯಾಹ್ನ 12.00 ಗಂಟೆಗೆ ಬಂದಿರುತ್ತಾನೆ. ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರದ ಆಲಮಿನ ಆಸ್ಪತ್ರೆಗೆ ಹೋಗಿರುತ್ತೇವೆ. ಆರೋಪಿತರ ಎಲ್ಲರೂ ನಮ್ಮ ಮೇಲೆ ಯಾವುದೇ ರೀತಯ ಹಲ್ಲೆ ಮಾಡಿರುವುದಿಲ್ಲ. ಚಾ.ಸಾ.1 ರವರು ಖೊಟ್ಟಿ ಪಿರ್ಯಾದಿ ಸಲ್ಲಿಸಿದ್ದು, ಅದರ ಪೂರ್ವಕವಾಗಿ ನ್ಯಾಯಾಲಯದ ಮುಂದೆ ಬಂದು ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ಸಾಕ್ಷಿಯ ಹೇಳಿಕೆಯಂತೆ ತೆರೆ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ.

**( ಎ.ಆರ್.ಎ.ಮುಲ್ಲಾ)**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಸಿಂದಗಿ.